1973 under section 4, identification cards have been given distribution of Bio-metric cards from Slum Board is in progress.

f) A direction has been given by the Government to issue Hakkupatra's to the people residing in slums of Government land only after handing over of the land from revenue Department to the BBMP with certain conditions. there is no provision for the Board to issue HAKKUPATRA'S but for issue of Bio-metric cards.

ಪ್ರವಾಸೋದ್ಯಮ ಅಭಿವೃದ್ಧಿಗೆ ನೀಡಿರುವ ಅನುದಾನ

61(164): ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ 3 ವರ್ಷಗಳಲ್ಲಿ ಸರ್ಕಾರ ರಾಯಚೂರು ಜಿಲ್ಲೆಯ ಪ್ರವಾಸೋದ್ಯಮಕ್ಕೆ ನೀಡಿರುವ ಅನುದಾನದ ಮೊತ್ತವೆಷ್ಟು? (ವರ್ಷವಾರು ವಿವರಗಳನ್ನು ನೀಡುವುದು);

ಆ) ಕಳೆದ 3 ವರ್ಷಗಳಲ್ಲಿ ಈವರೆವಿಗೂ ಎಷ್ಟು ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲಾಗಿದೆ? (ವಿವರಗಳನ್ನು ನೀಡುವುದು);

ಇ) ಈವರೆವಿಗೂ ಅಭಿವೃದ್ಧಿಪಡಿಸಿರುವ ಪ್ರವಾಸಿ ತಾಣಗಳಿಗೆ ಕಳೆದ 3 ವರ್ಷಗಳಲ್ಲಿ ವೆಚ್ಚ ಮಾಡಿರುವ ಮೊತ್ತವೆಷ್ಟು ? (ವರ್ಷ ಮತ್ತು ಪ್ರವಾಸಿ ತಾಣಗಳವಾರು ವಿವರಗಳನ್ನು ನೀಡುವುದು);

ಈ) ಕಳೆದ 3 ವರ್ಷಗಳಲ್ಲಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು? (ವರ್ಷವಾರು ವಿವರಗಳನ್ನು ನೀಡುವುದು);

ಉ) ಸಿಂಧನೂರು ನಗರ ಮತ್ತು ಗ್ರಾಂಮಾಂತರ ಪ್ರದೇಶಗಳಲ್ಲಿ ಎಷ್ಟು ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ? (ವಿವರಗಳನ್ನು ನೀಡುವುದು);

ಊ) ಸಿಂಧನೂರು ನಗರದ ಅಂಬಾ ಮಠ ಪ್ರವಾಸಿ ತಾಣದಲ್ಲಿ ಯಾತ್ರಾ ನಿವಾಸ ನಿರ್ಮಾಣಕ್ಕೆ ಸರ್ಕಾರ ನಿಗದಿಪಡಿಸಿದ್ದ ಅನುದಾನದ

ಮೊತ್ತವೆಷ್ಟು ಹಾಗೂ ಈವರೆವಿಗೂ ಬಿಡುಗಡೆಯಾಗಿರುವ ಅನುದಾನದ ಮೊತ್ತವೆಷ್ಟು ಮತ್ತು ಅದರ ಕಾಮಗಾರಿಯು ಈಗ ಯಾವ ಹಂತದಲ್ಲಿದೆ?

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು):

ಅ) ಕಳೆದ 3 ವರ್ಷಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿಗಾಗಿ ನೀಡಿರುವ ಅನುದಾನದ ವಿವರ ಕೆಳಗಿನಂತಿದೆ.

1. 2008–09 ರೂ. 35.00 ಲಕ್ಷಗಳು
2. 2009–10 ರೂ. 225.50 ಲಕ್ಷಗಳು
3. 2010–11 ರೂ. 92.20 ಲಕ್ಷಗಳು

ಒಟ್ಟು 352.70 ಲಕ್ಷಗಳು

ಆ) ಕಳೆದ ಮೂರು ವರ್ಷಗಳಿಂದ ರಾಯಚೂರು ಜಿಲ್ಲೆಯಲ್ಲಿರುವ 10 ಪ್ರವಾಸಿ ತಾಣಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸಲು ಕ್ರಮ ವಹಿಸಲಾಗಿದೆ. ವಿವರಗಳ ಪಟ್ಟಿ ಲಗತ್ತಿಸಿದೆ.

ಇ) ಕಳೆದ ಮೂರು ವರ್ಷಗಳಲ್ಲಿ ಪ್ರವಾಸಿ ತಾಣಗಳ ಅಭಿವೃದ್ಧಿಗೆ ರೂ. 352. 70 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. (ವಿವರಗಳ ಪ್ರತಿ ಲಗತ್ತಿಸಿದೆ).

ಈ) ಸಿಂಧನೂರು ತಾಲ್ಲೂಕಿನ ಕೊಲ್ಲೂರು ಗ್ರಾಮದ ಶ್ರೀ ಲಕ್ಷ್ಮೀ ದೇವಾಲಯದ ಬಳಿ ಶೌಚಾಲಯ ಹಾಗೂ ಕುಡಿಯುವ ನೀರಿನ ನಿರ್ಮಾಣಕ್ಕಾಗಿ ರೂ. 14.50 ಲಕ್ಷಗಳನ್ನು 2009–10ನೇ ಸಾಲಿನಲ್ಲಿ ಖರ್ಚು ಮಾಡಲಾಗಿದೆ.

ಉ) ಸಿಂಧನೂರು ತಾಲ್ಲೂಕಿನಲ್ಲಿ ಮಸ್ಕಿಯನ್ನು ಪ್ರವಾಸಿ ತಾಣವಾಗಿ ಗುರುತಿಸಲಾಗಿದೆ.

ಊ) ಸಿಂಧನೂರು ನಗರದ ಅಂಬಾ ಮಠದ ಬಳಿ ಯಾತ್ರಿನಿವಾಸ ನಿರ್ಮಾಣಕ್ಕಾಗಿ ರೂ. 60,37,186/– ಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಟೆಂಡರು ಕರೆದು ಈ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ಕಾಮಗಾರಿಯು ಪ್ಲಿಂತ್ ಲೆವೆಲ್‌ನವರೆಗೆ ಬಂದಿರುತ್ತದೆ. ಕಾಮಗಾರಿಯ ಪ್ರಗತಿಗನುಗುಣವಾಗಿ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಲಾಗುವುದು.

ರಾಯಚೂರು ಜಿಲ್ಲೆಯಲ್ಲಿ ಕಮ್ಮಿಕೊಂಡಿರುವ ಯೋಜನೆಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳ ಪಟ್ಟಿ

(ರೂ.ಲಕ್ಷಗಳಲ್ಲಿ)

ಕ್ರ.ಸ	ಯೋಜನೆಯ ಹೆಸರು	ಅಂದಾಜು ವೆಚ್ಚ	2008–09ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	2009–10ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	2010–11ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	ಅನುಷ್ಠಾನ ಸಂಸ್ಥೆ
1	ರಾಯಚೂರು ತಾಲ್ಲೂಕಿನ ಬೋಳುಮಾನದೊಡ್ಡಿ ಗ್ರಾಮದಲ್ಲಿ ಶ್ರೀ ತಿಮ್ಮಪ್ಪ ದೇವಸ್ಥಾನದ ಆವರಣದಲ್ಲಿ ಯಾತ್ರಿನಿವಾಸ ನಿರ್ಮಿಸುವ ಯೋಜನೆ	15.00	15.00	–	–	ಜಿಲ್ಲಾಧಿಕಾರಿಗಳು, ರಾಯಚೂರು ರವರಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪೂರ್ಣಗೊಂಡಿದೆ
2	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಬುದ್ದಿನ್ನಿ (ಸಾಸಾಬಾಳ್) ಶ್ರೀ ಕ್ಷೇತ್ರ ಶ್ರೀಮಾನ್ ಮಾಧವತೀರ್ಥರ ಬೃಂದಾವನ ಸನ್ನಿಧಾನದಲ್ಲಿ ಯಾತ್ರಿನಿವಾಸ ಕಲ್ಪಿಸುವ ಯೋಜನೆ	150.00	20.00	100.00	–	ಜಿಲ್ಲಾಧಿಕಾರಿಗಳು, ರಾಯಚೂರು ರವರಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ.
3	ರಾಯಚೂರು ಜಿಲ್ಲೆ, ಲಿಂಗಸುಗೂರು ತಾಲ್ಲೂಕಿನ ಶ್ರೀ ಗುರುಗುಂಟೇಶ್ವರ ಅಮರೇಶ್ವರ ದೇವಾಲಯದ ಬಳಿ ಯಾತ್ರಿನಿವಾಸ ನಿರ್ಮಾಣ	53.00	–	6.00	46.00	ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್, ಬೆಂಗಳೂರು ರವರಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ

(ರೂ.ಲಕ್ಷಗಳಲ್ಲಿ)

ಕ್ರ.ಸ	ಯೋಜನೆಯ ಹೆಸರು	ಅಂದಾಜು ವೆಚ್ಚ	2008–09ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	2009–10ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	2010–11ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	ಅನುಷ್ಠಾನ ಸಂಸ್ಥೆ
4	ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮುಂಡರಗಿ ಗ್ರಾಮದ ಶ್ರೀ ಶಿವರಾಯನ ಧಾರ್ಮಿಕ ಕ್ಷೇತ್ರದ ಬಳಿ ಯಾತ್ರಿನಿವಾಸ ನಿರ್ಮಿಸುವ ಯೋಜನೆ	41.20	–	10.00	–	ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್. ಐ.ಡಿ.ಎಲ್, ಬೆಂಗಳೂರು ರವರಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ
5	ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಕೊಪ್ಪರ ಗ್ರಾಮದ ಶ್ರೀ ಲಕ್ಷ್ಮೀನರಸಿಂಹ ಸುಕ್ಷೇತ್ರದಲ್ಲಿ ಯಾತ್ರಿನಿವಾಸ ನಿರ್ಮಿಸುವ ಯೋಜನೆ	25.00	–	10.00	15.00	ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್. ಐ.ಡಿ.ಎಲ್, ಬೆಂಗಳೂರು ರವರಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ
6	ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗಬ್ಬೂರು ಗ್ರಾಮದ ಶ್ರೀ ಬೂದಿಬಸವೇಶ್ವರ ಕ್ಷೇತ್ರದಲ್ಲಿ ಯಾತ್ರಿನಿವಾಸ ನಿರ್ಮಿಸುವ ಯೋಜನೆ	41.20	–	10.00	31.20	ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್, ಬೆಂಗಳೂರು ರವರಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ

ಕ್ರ.ಸ	ಯೋಜನೆಯ ಹೆಸರು	ಅಂದಾಜು ವೆಚ್ಚ	2008-09ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	2009-10ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	2010-11ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	ಅನುಷ್ಠಾನ ಸಂಸ್ಥೆ
7	ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮಾನಸಗಲ್ ಗ್ರಾಮದ ಶ್ರೀ ರಂಗನಾಥ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಿಸುವ ಯೋಜನೆ	65.00	-	10.00	-	ಜಿಲ್ಲಾಧಿ ಕಾರಿಗಳು, ರಾಯಚೂರು ರವರಿಗೆ ಹಣ ಬಿಡುಗಡೆ ಮಾಡಲಾಗಿದೆ.
8	ರಾಯಚೂರು ಜಿಲ್ಲೆಯ ಸೋಮಲಾಪುರ ಗ್ರಾಮದ ಸಿಂಧನೂರು ತಾಲ್ಲೂಕಿನ ಶ್ರೀ ಅಂಬಾದೇವಿ ಕ್ಷೇತ್ರದಲ್ಲಿ ಯಾತ್ರಿ ನಿವಾಸ ನಿರ್ಮಾಣ	60.37	-	-	-	ಇಲಾಖೆಯಿಂದ ಕಾಮಗಾರಿ ಕೈಗೊಳ್ಳ ಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ.
9	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಅಡಿವೇಶ ನಿರುಪಾದೇಶ್ವರ ಅಂಕಲಗಿ ಮಠದ ಬಳಿ ಯಾತ್ರಿನಿವಾಸ ನಿರ್ಮಿಸುವ ಬಗ್ಗೆ.	100.00	-	65.00	-	ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್, ಬೆಂಗಳೂರು ರವರಿಗೆ ಬಿಡುಗಡೆ ಮಾಡಲಾಗಿದೆ.

ಕ್ರ.ಸ	ಯೋಜನೆಯ ಹೆಸರು	ಅಂದಾಜು ವೆಚ್ಚ	2008-09ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	2009-10ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	2010-11ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	ಅನುಷ್ಠಾನ ಸಂಸ್ಥೆ
10	ಸಿಂಧನೂರು ತಾಲ್ಲೂಕಿನ ಕೊಲ್ಲೂರು ಗ್ರಾಮದ ಶ್ರೀ ಲಕ್ಷ್ಮಿ ದೇವಾಲಯದ ಬಳಿ ಶೌಚಾಲಯ ಮತ್ತು ಸುತ್ತಿಯುವ ನೀರಿನ ಸೌಲಭ್ಯ	14.50	-	14.50	-	ಸ್ಥಳೀಯ ನಿರ್ವಹಣೆಯ ಕೆ.ಆರ್.ಐ.ಡಿ.ಎಲ್, ಬೆಂಗಳೂರು ರವರ ಮುಖಾಂತರ ಕಾಮಗಾರಿ ಕೈಗೆತ್ತಿಕೊಂಡಿದ್ದು ಕಾಮಗಾರಿ ಪ್ರಗತಿಯಲ್ಲಿದೆ.
	ಒಟ್ಟು	565.27	35.00	225.50	92.20	